


ತೆಲುಗು ಮೂಲ: **ಕೆ.ಎನ್. ಮಲ್ಲೇಶ್ವರಿ**

ಕನ್ನಡಕ್ಕೆ: **ಎಸ್.ಡಿ. ಕುಮಾರ್**

ಕಲೆ: ವಿಶ್ವನಾಥ್ ಎ.ಎಸ್.




# ರಹೋನ್ಮಾದಿ



'ನಿನ್ನ ರಹಸ್ಯಗಳಿಗೇ ಇಡೀ ಬದುಕನ್ನೆಲ್ಲ ಖರ್ಚು ಮಾಡ್ತಿರುವಂತಿದೆ' ಮಾವಿನಮರದ ಸುತ್ತಲೂ ಕಟ್ಟಿರುವ ಸಿಮೆಂಟು ಕಟ್ಟೆಯ ಮೇಲೆ ಕೂರುತ್ತಾ ಹೇಳುತ್ತಾಳೆ ಪ್ರಶಾಂತಿ. ಅವಳ ಮೊಗವನ್ನು ನೋಡಲಿಕ್ಕೆ ಅನುಕೂಲವಾಗುವಂತೆ ಅಡ್ಜಸ್ಟ್ ಮಾಡಿಕೊಂಡು ಕೂತು 'ಈಗ ಏನಾಗಿದೆ? ಚೆನ್ನಾಗೇ ಇದೆ ಅಲ್ವಾ? ಸಾಧ್ಯ ಆದಾಗಲೆಲ್ಲ ನಾವು ಭೇಟಿಯಾಗ್ತಾನೆ ಇದ್ದೀವಲ್ಲ? ಹಾಗೂ ಒಂದು ವೇಳೆ ಭೇಟಿಯಾಗಲಿಕ್ಕೆ ಸಾಧ್ಯ ಆಗದೇ ದೂರವಾದ್ವಿ ಅಂದ್ಕೋ, ಹತ್ತು ವರುಷ ಕಳೆದ ಮೇಲೆ ಭೇಟಿಯಾದರೂ ಇದೇ ಪ್ರೀತಿ ಇರುತ್ತೆ. ನಾನಂತೂ ಬದಲಾಗಲ್ಲ' ಎಂದು ಹೇಳ್ತಿರುವಾಗ ಮಾಧವನಿಗೆ ಹೆಂಡತಿ, ಮಕ್ಕಳು ನೆನಪಿಗೆ ತಾಗಿದರು.

ಪ್ರತಿಕ್ರಿಯಿಸಲಿಲ್ಲ ಪ್ರಶಾಂತಿ. ನಸು ಬೆಳದಿಂಗಳ ಬೆಳಕಲ್ಲಿ ಮಾಧವನ ಗೆಳೆಯನ ತೋಟ ಹೂವಿನ ಪರಿಮಳಗಳಿಂದ ಘಮಘಮಿಸುತ್ತಿತ್ತು. ತೋಟವನ್ನು ಹಾದು ಹೊಲಗಳ ಮೇಲಿಂದ ನೋಟ ಸಾಗುತ್ತಿತ್ತು. ತಾರೆಗಳ ಸಮೂಹದೊಂದಿಗೆ ಮಿಣಿಮಿಣಿ ಹೊಳೆಯುತ್ತಿರುವ ಆಕಾಶದಿಂದ ಹಠಾತ್ತಾಗಿ ಬೆಳಕಿನ ಗೆರೆಯನ್ನು ಎಳೆಯುತ್ತಾ ಉಲ್ಕೆಯೊಂದು ಜಾರಿ ಬೀಳೋದನ್ನು ನೋಡಿ ಉದ್ವೇಗದಿಂದ ಎದ್ದು ನಿಂತಳು ಪ್ರಶಾಂತಿ.

'ನೀನೇ ಬೇಕು ಅಂದ ಮೇಲೆ ಇದೆಲ್ಲ ಸ್ವಲ್ಪ ಇರುಕು ಇರುಕಾಗಿದೆ. ತುಂಬಾನೆ ಒಳ್ಳೆ ಮನುಷ್ಯ ಮಣಿ. ಆದರೆ, ಅವನ ಮುಖವನ್ನು ಕೂಡ ನೋಡಲಿಕ್ಕೆ ಮನಸ್ಸಾಗುತ್ತಿಲ್ಲ. ದೊಡ್ಡ ಕಬ್ಬಿಣದ ಕೈಯಿಂದ ಕತ್ತನ್ನು ಒತ್ತಿಕೊಳ್ತಿರುವಂತಿದೆ. ಆ ಸಂಸಾರದಲ್ಲಿ ನಾನು ಇನ್ನೂ ಇರಲಾರೆ. ಅಲ್ಲಿ ಉಲ್ಕೆ ಉದುರಿಬಿದ್ದದ್ದು ನೋಡ್ದೆ ತಾನೆ? ನಾನಲ್ಲಿಗೇ ಹೋಗಿಬಿಡ್ತೀನಿ' ಚುನ್ನಿಯನ್ನು ಕಟ್ಟೆಯ ಮೇಲೆ ಬಿಸಾಡಿ, ಭೂಮಿ ಮತ್ತು ಆಕಾಶ ಬೆರೆತಂತಿರುವ ದಿಗಂತದ ಅಂಚಿನ ಕಡೆಗೆ ಇದ್ದಕ್ಕಿದ್ದಂತೆ ಓಡಲಾರಂಭಿಸಿದಳು.

ಸ್ಟನ್ ಆಗಿಬಿಟ್ಟ ಮಾಧವ. ಹೆಣ್ಣುಮಕ್ಕಳು, ಹೀಗೆ ಮಾತಾಡೋದು, ಅದರಲ್ಲೂ ಮೂವತ್ತು ಮೂರು ವರ್ಷಗಳ ವಯಸ್ಸಿನಲ್ಲಿ ದೇಹವೆಲ್ಲ ತಾಂಡವವಾಡುತ್ತಿರುವಂತೆ ವೇಗವಾಗಿ ಚಲಿಸೋದು ನೋಡಿದ್ದಿಲ್ಲ, ಇಲ್ಲಿಯತನಕ. ಇವಳನ್ನು ಹಾಗೇ ಬಿಟ್ಟರೆ, ಇವಳು ಆ ದಿಗಂತದ ಅಂಚನ್ನು ತಲುಪಿ ಅದನ್ನು ಹಿಡಿದು ಹಾಗೇ ಆಕಾಶದ ಮೇಲಕ್ಕೆ ಏರಿ, ಆಕಾಶದಂಗಳದಲ್ಲೇ ಮಾಯವಾಗಿಬಿಡುತ್ತಾಳೆ. ಮತ್ತೆ ತನಗೆ ಈ ಜನ್ಮದಲ್ಲಿ ಸಿಗಲ್ಲ.

ಹುಚ್ಚು ಉದ್ರೇಕದೊಂದಿಗೆ 'ಬರ್ತಿದ್ದೀನಿ ತಡಿ' ಹೇಳಿ ಚಪ್ಪಲಿ ಕೂಡ ಹಾಕಿಕೊಳ್ಳೋದನ್ನು ಮರೆತು ಹೊಲಗಳ ಮಧ್ಯೆ, ಅವಳ ಹಿಂದೆ ತಾನೂ ಓಡಿದ. ಅವನ ಪಾದಗಳಿಗೆ ಕಳೆಗಳು, ಒಣಗಿದ ಮುಳ್ಳು